**ಪಿ.ಡಬ್ಲೂ-4 / ಪಿ.ಡಬ್ಲೂ-4**

## ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .

**ಸಿ.ಸಿ.ನಂ. 820/2015**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವ |
| ತಂದೆಯ ಹೆಸರು | : | ಸಿದ್ದೇಗೌಡ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಗಾರೆಕೆಲಸ |
| ವಾಸಸ್ಥಳ | : | ಹಾಡ್ಯದಹುಂಡಿ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನಮ್ಮ ಗ್ರಾಮದ ಪಕ್ಕದ ನಿವಾಸಿಗಳಾಗಿರುತ್ತಾರೆ. ಸುಮಾರು 11 ವರ್ಷಗಳ ಹಿಂದೆ ಅಕ್ಕ-ಪಕ್ಕದ ಜಮೀನಿನವರಿಗೆ ತಿರುಗಾಡಲು ನಾಲೆಯ ಏರಿ ಮೇಲೆ ದಾರಿ ಇದ್ದು, ಅದನ್ನು ಆರೋಪಿಗಳು ಒತ್ತುವರಿ ಮಾಡಿಕೊಂಡು ತಿರುಗಾಡದಂತೆ ಬೇಲಿ ಹಾಕಿದ್ದರು. ಆಗ ನಾವು ನೀರಾವರಿ ಇಲಾಖೆಗೆ ಅರ್ಜಿ ನೀಡಿದ ಮೇರೆಗೆ ನೀರಾವರಿ ಇಲಾಖೆಯವರು ಕಂದಾಯ ಅಧಿಕಾರಿಗಳನ್ನು ಕರೆಸಿ, ಗಡಿ ಗುರುತಿಸಿ, ಕಲ್ಲನ್ನು ನೆಟ್ಟು ಆ ಕಲ್ಲಿಗೆ ಬಣ್ಣ ಹಾಕಿರುತ್ತಾರೆ. ಈ ರೀತಿ ನೆಟ್ಟಿದ್ದ ಕಲ್ಲನ್ನು ಆರೋಪಿಗಳು ಕಿತ್ತುಹಾಕಿ ಚರಂಡಿಯನ್ನು ಮುಚ್ಚಿರುತ್ತಾರೆ. ಆಗ ನಾವು ನೀರಾವರಿ ಇಲಾಖೆಯ ಅಧಿಕಾರಿಗಳ ಬಳಿ ಹೋಗಿ ಕೇಳಿದಾಗ ಪುನಃ ಅವರು ಸ್ಥಳಕ್ಕೆ ಬಂದು ಕಲ್ಲನ್ನು ನೆಡಿಸಿ, ಚರಂಡಿ ಹಾಕಿಸಿರುತ್ತಾರೆ. ಅದನ್ನು ಕೂಡ ಆರೋಪಿಗಳು ಕಿತ್ತುಹಾಕಿರುತ್ತಾರೆ. ಚಾಸಾ-1ರವರು ಸ್ಥಳಕ್ಕೆ ಬಂದು ಕಲ್ಲು ನೆಡೆಸಿದ್ದ ಜಾಗ ನೀರಾವರಿ ಇಲಾಖೆಗೆ ಸೇರಿದ ಜಾಗವಾಗಿರುತ್ತದೆ. ಆರೋಪಿಗಳು ಸದರಿ ಜಾಗವನ್ನು ಒತ್ತುವರಿ ಮಾಡಿ ತರಕಾರಿ ಬೆಳೆದಿದ್ದರು. ಈ ರೀತಿ ಸರ್ಕಾರಿ ಜಾಗವನ್ನು ಒತ್ತುವರಿ ತಿರುಗಾಡದಂತೆ

ತೊಂದರೆ ಮಾಡಿದ್ದರಿಂದ ಚಾಸಾ-1 ರವರು ದೂರು ನೀಡಿರುತ್ತಾರೆ. ನೀರಾವರಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬಂದು ನೆಟ್ಟಿದ್ದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-3 ರಿಂದ 6 ರಲ್ಲಿರುವ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರಗಳನ್ನು ಪೊಲೀಸರಿಗೆ ಹೇಳಿರುತ್ತೇನೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎಸ್.ಎಸ್.ಜಿ, ವಕೀಲರಿಂದಃ**

ನನ್ನ ತಮ್ಮ ನಾಗರಾಜು ಆರೋಪಿಗಳ ಮೇಲೆ ಈ ಹಿಂದೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. ನನಗೆ ಸೇರಿದ ಜಾಗದ ಸರ್ವೆ ನಂ. 126 ಆಗಿದ್ದು, ಆರೋಪಿಗಳಿಗೆ ಸೇರಿದ ಜಾಗದ ಸರ್ವೆ ನಂ. 127 ಆಗಿರುತ್ತದೆ. ನಮ್ಮ ಜಮೀನಿಗೆ ಹೋಗಲು ಸರ್ಕಾರಿ ಓಣಿ ಇರುತ್ತದೆ ಎಂದರೆ ಸರಿಯಲ್ಲ. ಬೀರ್ವಾಳು ನಾಲೆಯ ಏರಿಯ ಮೇಲೆ ಅಕ್ಕ-ಪಕ್ಕದ ಜಮೀನಿನವರು ತರಕಾರಿ ಬೆಳೆಯುತ್ತಾರೆ ಎಂದರೆ ಸರಿ. ಆರೋಪಿಗಳು ತಮ್ಮ ಜಮೀನಿಗೆ ಸಂಬಂಧಿಸಿದಂತೆ ನನ್ನ ಮತ್ತು ಇತರರ ವಿರುದ್ಧ ಮೂಲ ದಾವೆ ಸಂಖ್ಯೆ 319/2013 ರಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆ ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ಪೊಲೀಸರಿಗೆ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಹೇಳಿರುತ್ತೇನೆ. ಆರೋಪಿಗಳು ಯಾವುದೇ ನೀರಾವರಿ ಇಲಾಖೆಯ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಜಮೀನಿನ ಗಡಿರೇಖೆಯಲ್ಲಿರುವ ವ್ಯಾಪ್ತಿಯಲ್ಲಿ ಮಾತ್ರ ತರಕಾರಿ ಬೆಳೆದಿದ್ದರು ಮತ್ತು ಅಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ದಾರಿಗೆ ತೊಂದರೆ ಕೊಡದಿದ್ದರೂ ರಾಜಕೀಯ ಪ್ರೇರೆಪಿತರಾಗಿ ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ಜಮೀನಿನ ಹದ್ದುಬಸ್ತ್ ನ

ಫೋಟೊವನ್ನು ನೋಡಿ ಆರೋಪಿಗಳು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**